ಸಂಪಾದಕೀಯ

# ಕೆರೆ ಸಮ್ಮೇಳನದಲ್ಲಿ ಸಾಂಸ್ಕೃತಿಕ ಪುನರುಜ್ಜೀವನದ ಚಿಂತನೆಯಿರಲಿ

ಅಶೋಕ ಹಾಸ್ಯಗಾರ

ಶಿರಸಿ ತಾಲೂಕಿನ ಸೋಂದಾ ಸ್ವರ್ಣವಲ್ಲೀ, ಶಿರಸಿ ಮತ್ತು ಭೈರುಂಬೆಗಳಲ್ಲಿ ನವೆಂಬರ್ 13 ರಿಂದ ಮೂರು ದಿನಗಳ ಕೆರೆ ಸಮ್ಮೇಳನ ಜರುಗಲಿದೆ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ ಹಾಗೂ ಸ್ಥಳೀಯ ಸಂಘ-ಸಂಸ್ಥೆಗಳು ಸಹಕಾರ ನೀಡಲಿವೆ.

ಉದ್ಘಾಟನೆ, ಸಮಾರೋಪಗಳಂಥ ಔಪಚಾರಿಕತೆಯನ್ನು ಹೊರತುಪಡಿಸಿ, ನಡೆಯಲಿರುವ ವಿವಿಧ ಗೋಷ್ಠಿಗಳಲ್ಲಿ ಪಾಲ್ಗೊಳ್ಳುವುದಕ್ಕಾಗಿ ದೇಶದ ಹಲವೆಡೆಯಿಂದ ತಜ್ಞರು ಆಗಮಿಸಲಿದ್ದಾರೆ. ಆದರೆ ನಡೆಯಲಿರುವ ಗೋಷ್ಠಿಗಳಲ್ಲಿ ಮಂಡನೆಯಾಗುವ ವಿಷಯಗಳಾವುವು ಎನ್ನುವುದು ಆಮಂತ್ರಣ ಪತ್ರಿಕೆಯಲ್ಲಿಲ್ಲ.

2007 ಜೂನ್ 25 ರಿಂದ ಮೂರು ದಿನ ಹಂಪಿಯಲ್ಲಿ ನೀರು ಮತ್ತು ಸಂಸ್ಕೃತಿಯ ಕುರಿತಾಗಿ ರಾಷ್ಟ್ರೀಯ ವಿಚಾರ ಸಂಕಿರಣವೊಂದು ಜರುಗಿತ್ತು ಎನ್ನುವುದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು.

ಪೃಥ್ವಿ (ಭೂಮಿ), ಅಪ್ (ನೀರು), ತೇಜಸ್ (ಬೆಂಕಿ), ವಾಯು (ಗಾಳಿ) ಹಾಗೂ ಆಕಾಶ ಎಂಬ ಪಂಚ ಮಹಾಭೌತಿಕ ವಿಷಯಗಳ ಮೇಲೆ ಭಾರತೀಯರ ದೃಷ್ಟಿಕೋನಕ್ಕೆ ತೀರ ಭಿನ್ನವಾದ ವಿಚಾರ ಸರಣಿ ಪಾಶ್ಚಿಮಾತ್ಯ ದೇಶಗಳದ್ದು ಎಂಬುದು ತಿಳಿದ ಸಂಗತಿ.

ಭಾರತೀಯರಿಗೆ ಈ ಪಂಚಭೌತಿಕ ವಿಷಯಗಳು ಕೇವಲ ವಾಸ್ತವಿಕ ವಸ್ತುಗಳಾಗಿರದೇ ಮನುಷ್ಯನ ಸೃಷ್ಟಿ ಅಡಗಿರುವುದೇ ಇವುಗಳ ಸಂಲಗ್ನದಿಂದ ಎಂಬ ತಿಳುವಳಿಕೆಯಾದರೆ ಪಾಶ್ಚಾತ್ಯರಿಗೆ ಭೋಗಕ್ಕಿರುವ ಅವಶ್ಯಕತೆಗಳಾಗಿವೆ.

ಭಾರತೀಯರು ತಾತ್ವಿಕ ನೆಲೆಯಲ್ಲಿ ಪಂಚಭೌತಿಕ ವಿಷಯಗಳನ್ನು ವಿವೇಚಿಸುತ್ತಾರೆ. ಆ ಮೂಲಕವಾಗಿ ಅವುಗಳಿಗೆ ಸಾಂಸ್ಕೃತಿಕ ಆವರಣವನ್ನು ಕಟ್ಟಿಕೊಡುತ್ತಾರೆ. ಪಾಶ್ಚಾತ್ಯರು ಸುಖೋಪಭೋಗಗಳ ಹಿನ್ನೆಲೆಯಲ್ಲಿ ಪೃಥ್ವ್ಯಾದಿ ಭೌತಿಕ ಅಂಶಗಳಿಗೆ ಮೌಲ್ಯವನ್ನು ಕಟ್ಟುತ್ತಾರೆ.

ಭಾರತೀಯರು ಪ್ರಧಾನವಾದ ಈ ಐದು ಭೌತಿಕ ಸಂಗತಿಗಳು ತಾತ್ವಿಕ ನೆಲೆಯಲ್ಲಿ ಅರ್ಥೈಸಲ್ಪಡುವಾಗ ಅವುಗಳನ್ನು ಸಂಸ್ಕೃತಿಯ ಭೂಮಿಕೆಯಲ್ಲಿಡುತ್ತಾರೆ. ಆದ್ದರಿಂದಲೇ ದೇಶದಲ್ಲಿ ನೀರಿಗೆ ಸಂಬಂಧಪಟ್ಟಂತೆ ಗಂಗಾಷ್ಟಮಿ, ಕಾವೇರಿ ತೀರ್ಥೋದ್ಭವ, ಪವಿತ್ರ ಸ್ನಾನಗಳೆಂಬ ಭಕ್ತಿ-ಭಾವನಾತ್ಮಕ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ.

ಪ್ರಸಿದ್ಧ ಆರ್ಥಿಕ ತಜ್ಞ ಅಮರ್ತ್ಯ ಸೇನ್ ಒಂದು ಮಾತನ್ನು ಹೇಳುತ್ತಾರೆ-'ಸಮಾಜದ ಚಟುವಟಿಕೆಯನ್ನು ಅನ್ವೇಷಿಸುವಾಗ ಮತ್ತು ಮುಖ್ಯವಾಗಿ ಅದರ ಪ್ರಗತಿಯನ್ನು ವಿಶ್ಲೇಷಿಸುವಾಗ ಸಂಸ್ಕೃತಿಗೆ ಕೊಡಬೇಕಾದ ಪ್ರಾಮುಖ್ಯತೆಯನ್ನು ನೀಡದಿದ್ದರೆ ಅದರಿಂದ ವ್ಯತಿರಿಕ್ತ ಪರಿಣಾಮವನ್ನು ಕಾಣುವಂತಾಗುತ್ತದೆ" ಎನ್ನುತ್ತಾರೆ.

ಅನಿವಾರ್ಯವಾಗಿ ವಕ್ಕರಿಸಿದ ಜಾಗತೀಕರಣದಲ್ಲಿ ಭಾರತದ ಪ್ರಾತಿಪರ ಚಟುವಟಿಕೆಗಳಲ್ಲಿನ ಸಾಂಸ್ಕೃತಿಕ ಅಂತರ್ವಾಹಿನಿಗೆ ಧಕ್ಕೆಯಾಗಿದೆ. ಇದರಿಂದ ಪಂಚ ಮಹಾಭೂತಗಳಿರುವ ಸಾಂಸ್ಕೃತಿಕ ಆವರಣಗಳು ಕಳಚಿ ಬಿದ್ದಿವೆ.

ಪಂಚಮಹಾಭೌತಿಕಗಳಲ್ಲೊಂದಾಗಿರುವ ನೀರಿನ ಪಾತ್ರೆಗಳೋ, ನದೀ ಮೂಲಗಳೋ ತಾತ್ವಿಕತೆ, ಪಾವಿತ್ರತೆಯಿಂದ ನಿರ್ಲಕ್ಷ್ಯಕ್ಕೊಳಗಾಗುತ್ತಿರುವುದು ನಾಗರಿಕತೆ ಅಪಾಯಕ್ಕೆ ಸಿಲುಕಿರುವ ಸೂಚನೆಯಾಗಿದೆ.

ಪ್ರಾಕೃತಿಕವಾಗಿ ಕೆರೆಗಳು ಮಳೆ ನೀರು ಕೊಯ್ಲಿನ ಪ್ರಾಚೀನ ದೇಸಿ ಜಾಣ್ಮೆಯ ವಿನ್ಯಾಸಗಳೆಂದೂ ಅಂಥವುಗಳಿಗೆ ರಾಜ-ಮಹಾರಾಜರುಗಳು ನೆರವು ನೀಡುತ್ತಿದ್ದರೆಂಬುದು ಇತಿಹಾಸ. ಒಂದು ಅಂಕಿ-ಸಂಖ್ಯೆಯ ಪ್ರಕಾರ ದೇಶದಲ್ಲಿ 5 ಲಕ್ಷ ನೀರಾವರಿ ಕೆರೆಗಳಿವೆ. ಅವುಗಳಲ್ಲಿ 1 ಲಕ್ಷ 50 ಸಾವಿರ ಕೆರೆಗಳು ದಕ್ಷಿಣ ಭಾರತ ಪ್ರಸ್ಥಭೂಮಿಯಲ್ಲಿವೆ. ಇವು ಕೇವಲ ಕೃಷಿ ಮತ್ತಿತರ ಕೆಲಗಳಿಗೆ ಉಪಯೋಗವಾದವುಗಳಲ್ಲ. ಅವು ಆಯಾ ಭಾಗದ ಚಾರಿತ್ರಿಕ, ಸಾಂಸ್ಕೃತಿಕ ಜೀವನಕ್ರಮದ ಭಾಗವಾಗಿ ಹೋಗಿದ್ದವು.

ಕರ್ನಾಟಕದಲ್ಲೇ ನೋಡುವುದಾದರೆ ಗುಡ್ನಾಪುರದ ಗುದ್ದ ತಟಾಕ, ಬಾದಾಮಿಯ ಅಗಸ್ತ್ಯ ತೀರ್ಥ, ಗೋಕರ್ಣದ ಕೋಟಿತೀರ್ಥ, ಹಳೇಬೀಡಿನ ದ್ವಾರಸಮುದ್ರ ಹೀಗೆ ಹೇಳುತ್ತ ಹೋದರೆ ಕನ್ನಡ ನಾಡಿನ ಇತಿಹಾಸವನ್ನೇ ಪುನರ್ಮನನ ಮಾಡಿದಂತಾಗುತ್ತದೆ. ಮುಗದಕೆರೆ, ಮಾಸೂರಕೆರೆ ಕಕ್ಕರಹಳ್ಳಿಕೆರೆ ಹೆಸರು ಹೇಳತೊಡಗಿದರೆ ಜಾನಪದ ಸಾಹಿತ್ಯದ ಭಂಡಾರವೇ ತೆರೆದುಕೊಳ್ಳುತ್ತದೆ. ಇವುಗಳೊಂದಿಗಿರುವ ಪೌರಾಣಿಕ ಕತೆಗಳಂತೂ ಅವ್ಯಕ್ತ ಭಾವ ಪ್ರಪಂಚದ ದಿವ್ಯತೆಯನೀಯುತ್ತದೆ.

ಆದರೆ ಈಗ ಕೆರೆಯೆಂಬ ಸಾಂಸ್ಕೃತಿಕ ಕೊಳದಲ್ಲಿ ಭರಪೂರ ಮೀನು ಕೃಷಿ ಮಾಡಬಹುದೆಂಬ, ಪಂಪ್ ಹಚ್ಚಿ ನೀರು ತೆಗೆದು ಯಥೇಚ್ಛ ಬೆಳೆ ಬೆಳೆಯಬಹುದೆಂಬ ಹಣಕಾಸಿನ ಚಿಂತನೆಯಿಂದ ಉದಾತ್ತ ಜೀವನಪದ್ಧತಿ ರಾಡಿಯಾಗಿಬಿಟ್ಟಿದೆ.

ಬೆಂಗಳೂರಿನ ಧರ್ಮಾಂಬುಧಿ ಕೆರೆ ಕೇಂದ್ರೀಯ ಬಸ್ ನಿಲ್ದಾಣವಾಗಿದೆ. ಅನೇಕ ಕೆರೆಗಳು ಮಾಯವಾಗಿ ಬಡಾವಣೆಗಳು ತಲೆಯೆತ್ತಿವೆ. ಒತ್ತುವರಿಯಿಂದ ತೋಟಪಟ್ಟಿಗಳಾಗಿವೆ. ಇರುವಷ್ಟಾದರೂ ಕೆರೆಗಳನ್ನುಳಿಸಲು ನಡೆಸಿದ ಹೋರಾಟಗಳು ಒಂದೋ ಸಫಲವಾಗಿಲ್ಲ ಇಲ್ಲವೇ ಎರಡು ಗುಂಪುಗಳಾಗಿ ಪರಸ್ಪರ ಹೊಡೆದಾಟಗಳು ನಡೆಯುತ್ತಿವೆ.

ಕೆರೆಗಳು ಕಳೆದುಹೋಗುವುದರಿಂದ ಸಾಂಸ್ಕೃತಿಕ ವಾತಾವರಣ ನಾಶವಾಗುತ್ತದೆ. ನಮ್ಮ ಜೀವನಕ್ರಮದ ಭಾಗವಾಗಿರುವ ಪಶು ಪಕ್ಷಿ, ಜಲಚರಗಳ ಸಂತತಿ ಅಳಿವಿನೆಡೆ ಮುಖ ಮಾಡುತ್ತಿವೆ. ಕೆರೆಗಳ ಆಸುಪಾಸಿರುವ ಪವಿತ್ರ ಔಷಧಿ, ವನ್ಯ ಗಿಡಮರಗಳು ಕಾಣೆಯಾಗುತ್ತಿವೆ. ಬದುಕಿನ ಕೊಂಡಿ ತುಂಡಾಗುತ್ತಿವೆ.

ಶಿವಾನಂದ ಕಳವೆಯಂಥಹ ಕೆಲವರು ಕಳೆದುಹೋದ ಕೆರೆಗಳನ್ನು ಹುಡುಕಿಕೊಂಡು ಹೋಗುತ್ತಾರೆ. ಅವುಗಳ ಹೂಳೆತ್ತಿಸಿ ಸಾಂಸ್ಕೃತಿಕ ಮೌಲ್ಯ ಕೊಡಲು ಹೆಣಗಾಡುತ್ತಾರೆ. ವೃಕ್ಷಲಕ್ಷ ಆಂದೋಲನದವರು ಕೆರೆ ಸಮ್ಮೇಳನ ಮೂಲಕ ಜಾಗೃತಿ ಮೂಡಿಸಲು ಮುಂದಾಗುತ್ತಾರೆ.

ನಮ್ಮ ನಾಡಿನ ಚರಿತ್ರೆಯಲ್ಲಿನ ಒಂದು ಘಟನೆ ನಮ್ಮನ್ನಾಳುವವರು ಏನೆಲ್ಲಾ ಮಾಡಬೇಕು ಎಂದು ಹೇಳುತ್ತದೆ.

ತಾನು ರಾಜನಾದೆನೆಂದು ಮಗ ತಾಯಿ ಬಳಿ ಹೇಳಲು ಬಂದಾಗ- 'ಕೆರೆಯಂ ಕಟ್ಟಿಸು, ಮಾರ್ಗಮಂ ಸವೆಸು, ಛತ್ರಮಂ ನಿರ್ಮಿಸು, ಮರಂಗಳಂ ನೆಡಿಸು' ಎಂದು ತಾಯಿ ಅವನಿಗೆ ಕಿವಿಮಾತು ಹೇಳುತ್ತಾಳೆ.

ಕೆರೆ ಸಮ್ಮೇಳನದ ಆಶಯದಲ್ಲಿ ಇಂಥ ಸಾಂಸ್ಕೃತಿಕ ಚಿಂತನೆಗಳಿದ್ದರೆ ಒಳಿತು. ಕೆರೆಗಳಿರುವಲ್ಲೆಲ್ಲಾ ಉತ್ಸವಗಳಾಗಬೇಕು. ಪುನರುಜ್ಜೀವನದ ಕಾರ್ಯಕ್ರಮಗಳು ಜರುಗಬೇಕು. ಅದರಿಂದ ಕೃತಕ ಮಳೆಕೊಯ್ಲಿನ ಅಗತ್ಯ ಬೀಳದು. ಹೊಳೆ-ಹಳ್ಳಗಳಲ್ಲಿ ಮತ್ತೆ ನೀರು ಹರಿಯಲಾರಂಭಿಸಬಹುದು.